# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಮರಿ ಖರೀದಿಗೆ ಸಹಾಯಧನ ನೀಡುವ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:- ಮೀನುಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ: ಮೀನಿ/153/ ಪಂವಾಯೋ(1)/2015, ದಿನಾಂಕ: 16-12-2015.

******

## ಪ್ರಸ್ತಾವನೆ:

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, 2009-10ನೇ ಸಾಲಿನಲ್ಲಿ "ಮೀನುಮರಿ ಖರೀದಿಗೆ ಸಹಾಯ" ಎಂಬ ಯೋಜನೆಯನ್ನು ಜಾರಿಗೆ ತರಲಾಯಿತು. ಸದರಿ ಯೋಜನೆಯಡಿ ಮೀನುಮರಿ ಬೆಲೆಯ ಶೇ.50ರಷ್ಟು ಅಂದರೆ ವ್ಯಕ್ತಿಗತ ಗರಿಷ್ಟ ರೂ.5,000-00 ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಟ ಶೇ.20,000-00 ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. ಅಲ್ಲದೇ, ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಗರಿಷ್ಟ 40 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಬಿತ್ತನೆ ಸಾಂದ್ರತೆಯಂತೆ ಖರೀದಿಸಿದ ಮೀನುಮರಿಗಳ ಮೌಲ್ಯದ ಶೇ.50 ರಷ್ಟು ಗರಿಷ್ಟ ರೂ.25,000-00 ಗಳ ಮಿತಿಗೊಳಪಟ್ಟು ಪ್ರತಿ ಫಲಾನುಭವಿಗೆ ಸಹಾಯಧನ ನೀಡಲಾಗುತ್ತಿದೆ.

ಮುಂದುವರೆದು, ಸದರಿ ಯೋಜನೆಯಡಿ ವ್ಯಕ್ತಿಗತವಾಗಿ ನೀಡುತ್ತಿರುವ ರೂ.5,000-00 ಗಳ ಸಹಾಯಧನವನ್ನು ಕೈಬಿಡುವ ಕುರಿತು ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದಂತೆ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಆದರೆ, ವ್ಯಕ್ತಿಗತವಾಗಿ ನೀಡುತ್ತಿರುವ ರೂ.5,000-00 ಗಳ ಸಹಾಯಧನವನ್ನು ಕೈಬಿಟ್ಟಿರುವುದರಿಂದ, ಸದರಿ ಯೋಜನೆಯಡಿ ನಿರೀಕ್ಷಿತ ಪ್ರಗತಿ ಕಂಡುಬರುತ್ತಿಲ್ಲ. ಈ ಯೋಜನೆಗೆ 2015-16ನೇ ಸಾಲಿನಲ್ಲಿ ರೂ.51.00 ಲಕ್ಷ ಅನುದಾನ ಒದಗಿಸಿದ್ದು, ನವೆಂಬರ್ 2015ರ ಅಂತ್ಯದವರೆಗೆ ಬಿಡುಗಡೆಯಾದ ಅನುದಾನ ರೂ.25.50 ಲಕ್ಷಗಳ ಪೈಕಿ ಕೇವಲ ರೂ.4.19 ಲಕ್ಷ ಅನುದಾನ ಮಾತ್ರ ವೆಚ್ಚವಾಗಿರುತ್ತದೆ. ಸದರಿ ಯೋಜನೆಯಡಿ ಈ ಹಿಂದಿನಂತೆ ವ್ಯಕ್ತಿಗತವಾಗಿ ರೂ.5,000-00 ಗಳ ಸಹಾಯಧನವನ್ನು ಪುನಃ ನೀಡುವುದು ಸೂಕ್ತವಾಗಿರುವುದಲ್ಲದೇ, ವ್ಯಕ್ತಿಗತವಾಗಿ ನೀಡುತ್ತಿರುವ ಸಹಾಯಧನವನ್ನು ಕೈಬಿಟ್ಟಿರುವುದರಿಂದ, ಮೀನುಗಾರಿಕೆಯನ್ನೇ ಅವಲಂಬಿಸಿರುವ ಬಡ ಮೀನು ಕೃಷಿಕರಿಗೆ ತೊಂದರೆ ಆಗುತ್ತಿದೆ. ಅಲ್ಲದೆ, ಸದರಿ ಯೋಜನೆಯಡಿ ವಿಶೇಷ ಘಟಕ ಉಪಯೋಜನೆಗೆ ರೂ.9.00 ಲಕ್ಷ ಹಾಗೂ ಗಿರಿಜನ ಉಪ ಯೋಜನೆಗೆ ರೂ.3.00 ಲಕ್ಷ ಅನುದಾನ ನಿಗದಿಪಡಿಸಿರುವುದರಿಂದ, ಈ ಹಿಂದಿನಂತೆ ಅನುಷ್ಠಾನ ಮಾಡಿದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ / ಮೀನುಗಾರರಿಗೂ ಸಹ ಪ್ರಯೋಜನವಾಗುತ್ತದೆ.

ಆದುದರಿಂದ, ದಿನಾಂಕ: 24-04-2014 ರ ಸರ್ಕಾರದ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಸರ್ಕಾರದ ಅನುಮತಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ

ಆದೇಶ ಸಂಖ್ಯೆ: ಪಸಂಮೀ 01 ಮೀಇಯೋ 2016, ಬೆಂಗಳೂರು ದಿನಾಂಕ: 29-01-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, "ಮೀನುಮರಿ ಖರೀದಿಗೆ ಸಹಾಯ" ಎಂಬ ಯೋಜನೆಯಡಿ ಮೀನುಮರಿ ಬೆಲೆಯ ಶೇ.50ರಷ್ಟು ಅಂದರೆ ವ್ಯಕ್ತಿಗತ ಗರಿಷ್ಟ ರೂ.5,000-00 ಗಳ ಸಹಾಯಧನವನ್ನು ಸಂಖ್ಯೆ: ಪಸಂಮೀ/207/ಮೀಇಯೋ/2013, ದಿನಾಂಕ: 24-04-2014 ರ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

29/1/16

(ರಶ್ಮಿ ಶಿವಶಂಕರ ಷೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು
4) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಪಸಂಮೀ ಇಲಾಖೆ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4&5), ವಿಧಾನಸೌಧ, ಬೆಂಗಳೂರು.
7) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.